ಚುಕ್ಕೆ ಗರುಹಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು:

ಶ್ರೀ ಎಂ. ರಘುಪತಿ (ಮಾನುಗಾರಿಕಾ ಮಂತ್ರಿಗಳು).—ಲಿಖಿತ ಮೂಲಕ ಉತ್ತರಿಸುವ ಹನೇ ಪಟ್ಟಿಯ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದಿಡಲಾಗಿದೆ.

ಬಿಜಾಪುರ ಜಿಲ್ಲೆ ಹುನಗುಂದ ತಾಲ್ಲೂಕಿನಲ್ಲಿ ಕೆಂಪು ಗ್ರಾನೈಟ್ ಕಲ್ಲುಗಳನ್ನು ಅಕ್ರಮವಾಗಿ ಒಡೆದು ಸಾಗಿಸುವ ಬಗ್ಗೆ,

೯೨(ಹಿ೨೦) **ಶ್ರೀ ಶಿವಸಂಗಪ್ಪ ಶಿದ್ದಪ್ಪ ಕಡಪಟ್ಟಿ (ಹುನಗುಂದ).**—ಮಾನ್ಯ ಗಣಿ ಮಂತ್ರಿ ಭೂವಿಜ್ಞಾನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ಜಿಲ್ಲೆ ಹುನುಗುಂದ ತಾಲ್ಲೂಕಿನಲ್ಲಿ ಕೆಂಪು ಗ್ರಾನೈಟನ್ನು ಅಕ್ರಮವಾಗಿ ಒಡೆದು ಸಾಗಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ? ಹಾಗಿದ್ದಲ್ಲಿ ಇದನ್ನು ತಡೆಗಟ್ಟುವುದಕ್ಕೆ ಸರ್ಕಾರ ಕೈಗೊಂಡ ಕ್ರಮ ಏನು ?

ಆ) ಹನುಗುಂದ ತಾಲ್ಲೂಕಿನಲ್ಲಿ ಕೆಲವು ತಿಂಗಳ ಹಿಂದೆ ಅಕ್ರಮವಾಗಿ ಒಡೆಯುವ ಹಾಗೂ ಕಲ್ಲುಂ ಸಾಗಿಸುವ ಕೆಲವು ಬ್ಲಾಕ್‌ಗಳನ್ನು ಜಪ್ತಿ ಮಾಡಿದ್ದು ಹಾಗೂ ಅವುಗಳಲ್ಲಿ ಕೆಲವು ಬ್ಲಾಕ್‌ಗಳಲ್ಲಿ ಕಳುವು ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಇ) ಅಕ್ರಮವಾಗಿ ಕಲ್ಲು ಒಡೆಯುವ ಹಾಗೂ ಸಾಗಿಸುವವರ ಮೇಲೆ ಸರ್ಕಾರದವರು ಕೈಕೊಂಡ ಕ್ರಮ ಏನು ? ವಿವರ ಸಹಿತ ನೀಡುವುದು ?

ಈ) ಕಂದಾಯ ಮತ್ತು ಭೂಗರ್ಭ ಇಲಾಖೆಗಳಲ್ಲಿ ಗಣಿಗುತ್ತಿಗೆಯ ಕುರಿತು ಸಮನ್ವಯ ತಿಳುವಳಿಕೆಯ ಕೊರತೆಯಲ್ಲಿ ಸರ್ಕಾರಕ್ಕೆ ಗಣಿಗಳಿಂದ ಬರುವ ಆದಾಯ ಪೋಲಾಗುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮ ಏನು ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು).—

ಅ) ಹೌದು. ಕೆ. ಎಂ. ಎಂ. ಸಿ. ರೂಲ್ಸ್ ೧೯೬೯ರ ಮೇರೆಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಆ) ಹೌದು,

ಇ) ಈ ಬಗ್ಗೆ ತನಿಖೆ ಮಾಡಿ ಅಪರಾಧಿಗಳನ್ನು ಪತ್ತೆ ಮಾಡಿ ಸಂಬಂಧಪಟ್ಟವರ ಮೇಲೆ ಕ್ರಿಮಿನಲ್ ಕೇಸ್ ಬುಕ್ ಮಾಡಿ ಕ್ರಮ ಜರುಗಿಸುವಂತೆ ಸ್ಥಳೀಯ ಪೋಲೀಸ್ ಅಧಿಕಾರಿಗಳನ್ನು ಕೋರಲಾಗಿದೆ.

ಈ) ಹೌದು. ಕೆ. ಎಂ. ಎಂ. ಸಿ. ರೂಲ್ಸ್ ೩(೩)ರ ಪ್ರಕಾರ ರೆವಿನ್ಯೂ ಇಲಾಖೆಯ ಅಧಿಕಾರಿಗಳು ಗಣಿ ಮತ್ತು ಭೂವಿಜ್ಞಾನ ಇಲಾಖಾ ನಿರ್ದೇಶಕರ ಪೂರ್ವಾನುಮತಿ ಪಡೆಯದೆಯೇ ಇಂತಹ ಪರವಾನಗಿಯನ್ನು ನೀಡಿದ್ದಾರೆ. ಇಂತಹ ಎಲ್ಲಾ ಪ್ರಕರಣಗಳನ್ನು ತನಿಖೆಗಾಗಿ ಲೋಕಾಯುಕ್ತಕ್ಕೆ ಕಳುಹಿಸಲಾಗಿದೆ. ಇನ್ನೂ ಮುಂದೆ ಹೀಗಾಗದಿರಲೆಂದು ಸರ್ಕಾರವು ಖನಿಜಾಡಳಿತವನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ವರ್ಗಾಯಿಸಲು ಹರಿಯಾಣ ರಾಜ್ಯದಲ್ಲಿ ಜಾರಿಯಲ್ಲಿರುವಂತೆ ಕರ್ನಾಟಕದಲ್ಲೂ ಒಂದು ಕಾಯ್ದೆಯನ್ನು ಜಾರಿಗೆ ತರಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ನಂತರ ಭೂ ಸುಧಾರಣೆ ಕಾಯಿದೆಯನ್ನೂ ತಿದ್ದುಪಡಿ ಮಾಡಲಾಗುವುದು.